ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರುಕ್ಮಯ್ಯ | ಪ್ರಾಸಾಃ 11 |
| ತಂದೆಯ ಹೆಸರು | : | ನಾರಾಯಣ | ಚಾಸಾಃ 22 |
| ಪ್ರಾಯ | : | 52 ವರ್ಷ | **ದಿನಾಂಕಃ 09.09.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಎ.ಎಸ್.ಐ, ಬಜ್ಪೆ ಪೊಲೀಸ್ ಠಾಣೆ | |
| ವಾಸಸ್ಥಳ | : | ಕೂಳೂರು ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಕಳೆದ 3 ವರ್ಷಗಳಿಂದ ಮಂಗಳೂರಿನ ಬಜ್ಪೆ ಪೊಲೀಸ್ ಠಾಣೆ ಯಲ್ಲಿ ಎ.ಎಸ್.ಐ, ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 28.11.2022 ರಂದು ರಾತ್ರಿ ರೌಂಡ್ಸ್ ಕರ್ತವ್ಯಕ್ಕೆ ನೇಮಿಸಿದ್ದು ಅದರಂತೆ 11.00 ಗಂಟೆ ರಾತ್ರಿ ನಾನು ಚಾಸಾ-25 ರವರೊಂದಿಗೆ ಕರ್ತವ್ಯದಲ್ಲಿದ್ದು, ಅದೇ ದಿನ ನಮ್ಮ ಠಾಣೆಯಲಿ ದಾಖಲಾದ ಪ್ರಕರಣಕ್ಕೆ ಸಂಬಂದಪಟ್ಟ ಆರೋಪಿಯನ್ನು ದಸ್ತಗಿರಿ ಮಾಡುವಂತೆ ಸಂಜೆ ಠಾಣೆಯಲ್ಲಿ ಬ್ರೀಫಿಂಗ್ ಗೆ ಹಾಜರಾದಾಗ ಈ ಪ್ರಕರಣದ ತನಿಖಾಧಿಕಾರಿಯವರಾದ ಚಾಸಾ-28 ರವರು ಮಾಹಿತಿ ನೀಡಿದ್ದು ನಾವು ರಾತ್ರಿ ಕರ್ತವ್ಯ ಮಾಡುತ್ತಾ ದಿನಾಂಕ 29.11.2022ರಂದು ಬೆಳಗ್ಗೆ 6.15 ಗಂಟೆಗೆ ಇಲಾಖಾ ವಾಹನದಲ್ಲಿ ತೆಂಕ ಎಕ್ಕಾರು ಗ್ರಾಮದ ಎಕ್ಕಾರು ಬಸ್ ನಿಲ್ದಾಣದ ಬಳಿ ಹೋಗುತ್ತಿರುವಾಗ ಬಸ್ ನಿಲ್ದಾಣದಲ್ಲಿ ಇದ್ದ ಒಬ್ಬ ವ್ಯಕ್ತಿ ನಮ್ಮನ್ನು ಕಂಡು ಅಲ್ಲೇ ಮರೆಮಾಚಿ ಕುಳಿತುಕೊಳ್ಳುವುದನ್ನು ಕಂಡು ನಾವು ಕೂಡಲೇ ವಾಹನವನ್ನು ನಿಲ್ಲಿಸಿ, ಅಲ್ಲಿ ಗೆ ಹೋಗಿ ನೋಡಲಾಗಿ ಆತ ನಮ್ಮನ್ನು

ನೋಡಿ ಓಡಲು ಪ್ರಯತ್ನಿಸಿದ್ದು, ನಂತರ ಆತನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ದುರ್ಗೇಶ , 33 ವರ್ಷ ಪ್ರಾಯ, ತಂದೆ- ಬೊಗ್ರ ಪಲ್ಲದಕೋಡಿ ಮನೆ ಎಂದು ತಿಳಿಸಿರುತ್ತಾನೆ. ಆಗ ಆತನು ನಮಗೆ ಹೇಳಿದ ಪ್ರಕರಣಕ್ಕೆ ಸಂಬಂದಪಟ್ಟ ಆರೋಪಿ ಎಂದು ಖಚಿತಪಡಿಸಿ, ಆತನನ್ನು ನಮ್ಮ ಇಲಾಖಾ ವಾಹನದಲ್ಲಿ ಠಾಣೆಗೆ ಕರೆದುಕೊಂಡು ಬಂದು , ಚಾಸಾ-28 ರವರಿಗೆ ಮಾಹಿತಿ ನೀಡಿ ಆತನನ್ನು ಅವರ ಮುಂದೆ ಹಾಜರುಪಡಿಸಿರುತ್ತೇವೆ. ಈ ಬಗ್ಗೆ ದಿನಾಂಕ 05.02.2023 ರಂದು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಕೆ.ಡಿ.ಎಸ್. ವಕೀಲರಿಂದಃ</u>**-

3. ದಿನಾಂಕ 28.11.2022 ರಂದು ನಿಮಗೆ ಪ್ರಾಂತ್ಯದಲ್ಲಿ ಕರ್ತವ್ಯಕ್ಕೆ ನೇಮಿಸಿದ್ದರು ಎಂದರೆ ನಮ್ಮ ಠಾಣಾ ವ್ಯಾಪ್ತಿಗೆ ಸಂಬಂದಪಟ್ಟಂತೆ ಎಂದು ನುಡಿಯುತ್ತಾರೆ. ನಮ್ಮ ಸರಹದ್ದಿನ ವ್ಯಾಪ್ತಿಯಲ್ಲಿ ನಾನು ಒಬ್ಬನೇ ಕರ್ತವ್ಯದಲ್ಲಿ ಇದ್ದೆ. ರಾತ್ರಿ ಸರಹದ್ದಿನಲ್ಲಿ ಬೀಟ್ ಪ್ರೊಂಟ್ ಇದ್ದು ಆ ಬಗ್ಗೆ ವರದಿಯನ್ನು ತನಿಖಾಧಿಕಾರಿಯವರಿಗೆ ನೀಡಿರುವುದಿಲ್ಲ. ತೆಂಕ ಎಕ್ಕಾರು ಮಾರ್ಗ ಕಟೀಲಿನಿಂದ ಬಜ್ಪೆಗೆ ಹೋಗುವ ದಾರಿ ಎಂದರೆ ಸರಿ. ಬೆಳಗ್ಗೆ 5.30 ಸಮಯದಲ್ಲಿ ಆ ಮಾರ್ಗದಲ್ಲಿ ಸುಮಾರು ಜನ ಹೋಗುತ್ತಾರೆ. ನಾವು ತೆಂಕ ಎಕ್ಕಾರು ಬಸ್ ನಿಲ್ದಾಣಕ್ಕೆ ಹೋದ ಸಮಯದಲ್ಲಿ ಆರೋಪಿ ಮಾತ್ರ ಇದ್ದ, ಬೇರೆ ಯಾರು ಇರಲಿಲ್ಲ. ಆ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ, ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ. ತೆಂಕ ಎಕ್ಕಾರು ಬಸ್ ನಿಲ್ದಾಣ ಸಾರ್ವಜನಿಕ ಸ್ಥಳ. ಸಾರ್ವಜನಿಕ

ಸ್ಥಳದಲ್ಲಿ ಆರೋಪಿಯನ್ನು ದಸ್ತಗಿರಿ ಮಾಡಿರುವ ಬಗ್ಗೆ ಮಹಜರು ಮಾಡಿರುವುದಿಲ್ಲ. ತೆಂಕ ಎಕ್ಕಾರು ಬಸ್ ನಿಲ್ದಾಣದಲ್ಲಿ ಆದ ಪ್ರಕ್ರಿಯೆ 10 ನಿಮಿಷಗಳ ಕಾಲ ನಡೆದಿರುತ್ತದೆ. ಆ ಸಮಯದಲ್ಲಿ ಸಾರ್ವಜನಿಕರು ಆ ಮಾರ್ಗವಾಗಿ ಹೋಗಿರುತ್ತಾರೆ. ಸಾರ್ವಜನಿಕರ ಸಮಕ್ಷಮದಲ್ಲಿ ನಾನು ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ. ಅಲ್ಲಿಂದ ಠಾಣೆಗೆ ಹೋಗಿರುತ್ತೇವೆ. ಸದರಿ ಜಾಗದಿಂದ ನಮ್ಮ ಠಾಣೆಗೆ 5 ಕಿ.ಮೀ ಅಂತರ ಇರುತ್ತದೆ. ಇದರ ಮಧ್ಯದಲ್ಲಿ ಎಷ್ಟು ಬೀಟ್ ಪ್ರೊಂಟ್ ಇದೆ ಎಂದರೆ ಈಗ ಹೇಳಲು ನೆನಪಿಲ್ಲ. ಸದರಿ ಬೀಟ್ ಪ್ರೊಂಟ್ ಗಳಲ್ಲಿ ನಾನು ಸಹಿ ಮಾಡಿ, ಆರೋಪಿಯನ್ನು ದಸ್ತಗಿರಿ ಮಾಡಿರುವ ಬಗ್ಗೆ ಬರೆದಿರುವುದಿಲ್ಲ. ಬೆಳಗ್ಗೆ 6.45 ಗಂಟೆಗೆ ಠಾಣೆಗೆ ತಲುಪಿರುತ್ತೇವೆ. ತಕ್ಷಣವೇ ತನಿಖಾಧಿಕಾರಿಯವರಿಗೆ ಮಾಹಿತಿ ನೀಡಿ, ಹಸ್ತಾಂತರಿಸಿರುತ್ತೇನೆ, ಆ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ.

4. ಆರೋಪಿ ತಪ್ಪೊಪ್ಪಿಗೆ ನೀಡಿರುವ ಸಮಯದಲ್ಲಿ ನಾನು ಹಾಜರಿದ್ದೆ. ನಾನು ಹೇಳಿದಂತೆ 29.11.2022 ರಂದು ನಾನು ಹೇಳಿದ ಸಮಯ ಮತ್ತು ಜಾಗದಲ್ಲಿ ಆರೋಪಿಯನ್ನು ನಮ್ಮ ವಶಕ್ಕೆ ಪಡೆದಿರುವುದಿಲ್ಲ ಮತ್ತು ಆರೋಪಿ ಸದರಿ ಜಾಗದಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಸಾರ್ವಜನಿಕ ಸ್ಥಳದಲ್ಲಿ ಮಹಜರು ಮಾಡಿರುವುದಿಲ್ಲ ಮತ್ತು ಅದೇ ಕಾರಣಕ್ಕೆ ಆ ಬಗ್ಗೆ ಬೀಟ್ ಪುಸ್ತಕದಲ್ಲಿ ಬರೆದು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ವಶಕ್ಕೆ ಪಡೆದ ಮೇಲೆ ಬೀಟ್ ರೌಂಡ್ಸ್ ಗೆ ಹೋಗುವುದಿಲ್ಲ.

5. ನಾನು ಆರೋಪಿಯನ್ನು ದಸ್ತಗಿರಿ ಮಾಡುವ ಮುನ್ನ ಬೀಟ್ ಪ್ರೊಂಟ್ ಗಳಲ್ಲಿ ಮಾಡಿರುವ ಸಹಿಯ ವರದಿಯನ್ನು ತನಿಖಾಧಿಕಾರಿಯವರಿಗೆ ನೀಡಿರುವುದಿಲ್ಲ. ನಾನು ಆರೋಪಿಯನ್ನು ಮೇಲೆ ಹೇಳಿದಂತೆ ವಶಪಡಿಸಿಕೊಂಡಿರುವುದಿಲ್ಲ, ಠಾಣೆಗೆ ಬಂದಿರುವ ವ್ಯಕ್ತಿಯನ್ನು ವಶಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿ ಯಾವುದೇ ತಪ್ಪೊಪ್ಪಿಗೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.